## ಕುದುರೆ ಫೋನು

‘ಇಡೀ ರಾತ್ರಿ ನೀವು ಶಾಲಿ, ಶಾಲಿ ಎಂದು ಕನವರಿಸ್ತಿದ್ರಿ. ಯಾರ್‍ರಿ ಅದು ಶಾಲಿ?’ ಎಂದು ಶೀಲಾ ತನ್ನ ಗಂಡ ವೆಂಕನನ್ನು ಬೆಳಗ್ಗೆ ಎದ್ದೊಡನೆ ತರಾಟೆಗೆ ತೆಗೆದುಕೊಂಡಳು. ‘ಒಹ್! ಅದಾ ನಿನ್ನೆ ರೇಸ್ ಆಡಿದ್ನಲ್ಲಾ... ರೇಸ್‌ನಲ್ಲಿ ಓಡಿದ ಕುದುರೆಯ ಹೆಸರು ಕಣೆ’ ಎಂದು ವೆಂಕ ಸುಳ್ಳು ಹೇಳಿ ತಪ್ಪಿಸಿಕೊಂಡ. ಹೆಂಡತಿಯ ವಿಚಾರಣೆಯಿಂದ ಶಾಕ್ ಆದ ವೆಂಕ, ಗಡಿಬಿಡಿಯಲ್ಲಿ ಮೊಬೈಲ್ ಫೋನನ್ನು ಮನೆಯಲ್ಲಿಯೇ ಬಿಟ್ಟು ಆಫೀಸ್‌ಗೆ ಹೋದ. ಸಂಜೆ ಕಚೇರಿಯಿಂದ ಮನೆಗೆ ಹಿಂತಿರುಗುತ್ತಿದ್ದಂತೆ ಶೀಲಾಳ, ‘ರೀ ನಿಮ್ಮ ಕುದುರೆ ಫೋನ್ ಮಾಡಿತ್ತು...’ ಎಂಬ ಮಾತು ಸ್ವಾಗತಿಸಿತು!

**ತೈರೊಳ್ಳಿ ಮಂಜುನಾಥ ಉಡುಪ**





## ಕೈ ತೊಳೆಯುವುದು

ಕಂಪನಿಯೊಂದರ ಮುಖ್ಯ ಕಚೇರಿಯಲ್ಲಿ ನಡೆಯುತ್ತಿದ್ದ ಸಂದರ್ಶನಕ್ಕೆ ಶೀನಿ ಹೋಗಿದ್ದ. ಸಂದರ್ಶನ ಮಾಡುತ್ತಿದ್ದ ಕಂಪನಿಯ ಮುಖ್ಯಸ್ಥರು, ‘ನಮ್ಮ ಕಂಪನಿಯಲ್ಲಿ ಶಿಸ್ತು, ಕಾರ್ಯಕ್ಷಮತೆಯೊಂದಿಗೆ ಸ್ವಚ್ಛತೆ ಕೂಡ ಮುಖ್ಯ. ಯಾವಾಗಲೂ ಕೆಳಗೆ ಲಿಫ್ಟ್ ಪಕ್ಕದಲ್ಲಿರುವ ವಾಶ್‌ಬೇಸಿನ್‌ನಲ್ಲಿ ಕೈ ತೊಳೆದುಕೊಂಡೇ ಒಳಗೆ ಬರಬೇಕು’ ಎಂದರು. ತಕ್ಷಣ ಶೀನಿ, ‘ನಾನು ಅಲ್ಲಿ ಕೈ ತೊಳೆದುಕೊಂಡೇ ಒಳಗೆ ಬಂದೆ ಸಾರ್’ ಎಂದ. ಮುಖ್ಯಸ್ಥರು, ‘ನಮ್ಮಲ್ಲಿ ಎಲ್ಲದಕ್ಕಿಂತ ಸತ್ಯ ಹೇಳುವುದು ಮುಖ್ಯ. ಲಿಫ್ಟ್ ಪಕ್ಕ ವಾಶ್‌ಬೇಸಿನ್ ಇಲ್ಲ, ನೀವಿನ್ನು ಹೊರಡಬಹುದು’ ಎಂದು ಬಾಗಿಲ ಕಡೆ ಕೈ ತೋರಿಸಿದರು.

**ಕೆ. ಶ್ರೀನಿವಾಸರಾವ್**